Reg No. B G 155 6-3-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ.
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೀವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ.

ಸ್ಥಾಪಕರು : ಆರತುಪಿ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಗಡಿ ಜಗಳ ಬಗೆಹರಿಸಲು ಜಯಪ್ರಕಾಶ ನಾರಾಯಣರ ಸಲಹೆ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗಸೇ ನೆರವೇರಿಸಲಾಗುವುದು

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗಸ್ಪೂರು) ರವರೂ ಶುಭಾಶಯಮೊಡನೆ ನೆರವು ನೀಡಿರುವರು

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ಪೂರ್ವಸಗಳಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ವಿದ್ವಾಂಸರಿಗೆ ಪಾರಿತೋಷಕ

ತಿರುಪತಿ— ಆಂಧ್ರ ಸರಕಾರವು ಪ್ರತಿ ವರ್ಷ 6 ಮಂದಿ ವಿದ್ವಾಂಸರನ್ನು ಸನ್ಮಾನಿಸಿ, ಅವರಿಗೆ ರೂ. 1116 ಮತ್ತು ಒಂದು ಶಾಲನ್ನೂ ಅವರ ಪತ್ನಿಯರಿಗೆ ಒಂದೊಂದು ಸೀರೆಯನ್ನೂ ಪಾರಿತೋಷಕವಾಗಿ ಕೊಡಲಿದೆ.

ಕೇರಳಕ್ಕೆ ಕನ್ನಡ ಉಪಾಧ್ಯಾಯರು

ಪರದಾಲಾ (ಕಾಸರಗೋಡು) — ತಿರುವನಂತಪುರದಲ್ಲಿ ಕನ್ನಡ ಉಪಾಧ್ಯಾಯರ ಅಭಾವವಿರುವದರಿಂದ, ಕೇರಳ ಸರಕಾರವು ಮೈಸೂರು ರಾಜ್ಯದ ಟ್ರೇನಿಂಗು ಕಾಲೇಜು ಮತ್ತು ತಮ್ಮ ಕಾಲೇಜುಗಳಲ್ಲಿ ಕಾಸರಗೋಡು ಕನ್ನಡಿಗರಿಗೆ ಕೆಲವು ಸ್ಥಾನ ರಿಜರ್ವ್ ಮಾಡಲು ಸೂಕ್ತ ಕಾರ್ಯಕ್ರಮ ಕೈಗೊಂಡಿದೆ.

★

ಪುರುಷರಿಗೂ ಮಾತ್ರೆ

ಲಿವರ್ಪೂಲಿನಲ್ಲಿ ಸಂಶೋಧನಾ ತಂಡವು 60 ಸಾವಿರ ಪೌಂಡು ಪ್ರಾಜೆಕ್ಟಿನಲ್ಲಿ ಪುರುಷರಿಗೆ ಸಂತತಿ ಸ್ತಂಭನ ಮಾತ್ರೆ ತಯಾರಿಸಲು ಶ್ರಮಿಸುತ್ತಿದೆ.

●

ಅಗ್ನಿ ಅನಾಹುತ

ಸಿಲ್ಚಾರ್—ಇಲ್ಲಿ ಒಂದು ಮಿಠಾಯಿ ಅಂಗಡಿಯಲ್ಲಿ ಭಾರಿ ಅಗ್ನಿ ಉತ್ಪಾದನೆಯಾಗಿ ಅಲ್ಲಿ ಮಲಗಿದ್ದ ಮಾಲೀಕ ಮತ್ತು ನೌಕರರು ಒಟ್ಟು 7 ಮಂದಿ ಜೀವಸಹಿತ ಸುಟ್ಟುಹೋದರು.

○

ಆಟದ ಸಾಮಾನುಗಳು

ಪಶ್ಚಿಮ ಜರ್ಮನಿಯಲ್ಲಿನ ನ್ಯೂರೆಂಬರ್ಗಿನಲ್ಲಿ ನಡೆದ ಮಕ್ಕಳ ಆಟದ ಸಾಮಾನುಗಳ ಸಂತೆಯಲ್ಲಿ 33 ದೇಶಗಳ 1350 ಪ್ರದರ್ಶನಕಾರರು 2 ಲಕ್ಷಕ್ಕೂ ಹೆಚ್ಚು ವಸ್ತುಗಳು ಪ್ರದರ್ಶಿಸಲ್ಪಟ್ಟಿತ್ತು

ಮಹಾರ್ಜ ಶಿಫಾರಸು

ಬೆಳಗಾಂ— ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಸನಿಕೋಪರು ಮಹಾರ್ಜ ಕಮಿಷನ ಶಿಫಾರಸ್ಸನ್ನು ಪೂರ್ತಿ ಜಾರಿಗೆ ತರುವಂತೆ ಕೇಂದ್ರವನ್ನು ಒತ್ತಾಯ ಮಾಡಿರುವರು.

ಬಿಲ್ಲಾ ಕಂಪೆನಿಗಳು

ನವದೆಹಲಿ— ರಾಜ್ಯಸಭೆಯಲ್ಲಿ ಕಾಂಗ್ರೆಸ್ ಮತ್ತು ವಿರೋಧ ಸದಸ್ಯರು, ಬಿರ್ಲಾ ತಂಡದ ಕಂಪೆನಿಗಳ ಮೇಲಿನ ಆಪಾದನೆ ತನಿಖೆಗೆ ಬಂದು ವಿಚಾರಣಾ ಆಯೋಗ ನೇಮಿಸಬೇಕೆಂದು ಹಾಕಿದ ಕೇಳಿಕೆಯನ್ನು ಉಪಪ್ರಧಾನಿ ಶ್ರೀ ಮೊರಾರ್ಜಿ ದೇಸಾಯರು ತಿರಸ್ಕರಿಸಿದರು.

●

ಮದ್ಯದಂಗಡಿಯಲ್ಲಿ ಪೋಸ್ಟಾಫೀಸು

ಕಾರವಾರ— ಕೊಲ್ಲಾಕ್ಟಾ—ಅಡುಕಟ್ಟೆ ಗ್ರಾಮಕ್ಕೆ ನುಂಜೂರಾದ ಪೋಸ್ಟಾಫೀಸನ್ನು ಈಚೆಗೆ ಮುಂಡ್ಯದಂಗಡಿಯಲ್ಲಿ ತೆರೆದಿರುವ ಬಗ್ಗೆ ಗ್ರಾಮಸ್ಥರು ಪ್ರತಿಭಟಿಸಿರುವರು.

★

ಜಯಪ್ರಕಾಶರ ಸಲಹೆ

ಬೊಂಬಾಯಿ — ಮಹಾರಾಷ್ಟ್ರ — ಮೈಸೂರು ಗಡಿ ವ್ಯಾಜ್ಯ ವ್ಯವಸ್ಥೆಗೆ ವಿವಿಧ ರಾಜಕೀಯ ಪಕ್ಷಗಳ ಸಮ್ಮೇಳನ ನಡೆಸಲು ಸರ್ವೋದಯ ನಾಯಕ ಜಯಪ್ರಕಾಶ ನಾರಾಯಣರು ಪ್ರಧಾನಿ ಇಂದಿರಾರವರನ್ನು ಒತ್ತಾಯ ಮಾಡಿರುವರು.

ನಿಲುವಿನಲ್ಲಿ ಬದಲಿಲ್ಲ

ಬೆಂಗಳೂರು— ಡೆಲ್ಲಿಯಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಶುಕ್ರವಾರ, ಶನಿವಾರ ಚರ್ಚಿಸಲಾಗುವ ಮಹಾರ್ಜ ಕಮಿಷನ್ ವರದಿ ಬಗ್ಗೆ ಸರಕಾರದ ಭದ್ರವಾದ ನಿಲುವನ್ನೇ ತಾವು ಅನುಸರಿಸುವುದಾಗಿ ಹೊಸ ಯಾವ ನಿಲುವಿಗೂ ಕಟ್ಟುಬೀಳುವದಿಲ್ಲವಿಂದೂ ಮುಖ್ಯ ಮಂತ್ರಿ ಶ್ರೀ ನೀರೇಂದ್ರ ಪಾಟೀಲರು ಮಂತ್ರಿಮಂಡಲದ ಸಹೋದ್ಯೋಗಿಗಳಿಗೆ ತಿಳಿಸಿದುದಾಗಿ ಗೊತ್ತಾಗಿದೆ.

★

ಕಳ್ಳ ಸಿಕ್ಕಿದ

ಬೆಂಗಳೂರು— ಕುಪ್ರಖ್ಯಾತ ಕಳ್ಳ ಪುಟ್ಟರಾಜು ಮತ್ತಿತರರು ದಸ್ತಗಿರಿ ಮಾಡಲ್ಪಟ್ಟರು – 13 ಮನೆಗಳಲ್ಲಿ ಅವರು ಕದ್ದಿದ್ದ ರೂ. 7000 ಬೆಲೆಯ ಪದಾರ್ಥಗಳನ್ನು ವಶಕೆಡಿಸಿಕೊಳ್ಳಲಾಯಿತು.

★

ರಹಸ್ಯ ವಿಸರ್ಜಿಡೇ

ತಾಷ್ಕಾಟು ಒಪ್ಪಂದದಲ್ಲಿ ಕಾಶ್ಮೀರ ಬಗ್ಗೆ ರಹಸ್ಯ ಮೂಲ ನಿರ್ಣಯ ಲೇಖವಿರುವದೆಂದು ಒಂದು ಬ್ರಿಟಿಷ್ ಮಾಡಿದ ಆರೋಪವನ್ನು ರಷ್ಯಾ ನಿರೋಧಿಸಿದೆ.

.... 7-3-69 ರಿಂದ ಅನೋಕ್ಷ ಆರಂಭ ....

ಮೆಹಮೂದ್ ನಿಮ್ಮನ್ನು ನಗೆಗಡಲಿನಲ್ಲಿ ಮುಳುಗಿಸುವಂತೆ ಮಾಡುವ
ಅತ್ಯುತ್ತಮ ಸಂಗೀತಮಯ ಹಿಂದಿ ಚಿತ್ರ

ಪಡೋಸನ್ (ಕಲರ್‌ನಲ್ಲಿ)

ಪಾತ್ರ—ಸುನೀಲ್‌ದತ್, ಕಿಶೋರ್‌ಕುಮಾರ್, ಸಯಿರಾ ಬಾನು ಮುಂತಾದವರು
ದಿಗ್ದರ್ಶನ : ಜ್ಯೋತಿ ಸ್ವರೂಪ್ — ಸಂಗೀತ : ಆರ್. ಡಿ. ಬರ್ಮನ್

ಒಲಂಪಿಯಾ ಮತ್ತು ಶ್ರೀ ಚಿತ್ರಮಂದಿರಗಳಲ್ಲಿ
ದಿನ : 2-30, 6 ಮತ್ತು 9-30 ಕ್ಕೆ ದಿನ : 3, 6-30 10 ಕ್ಕೆ

ಒಲಂಪಿಯಾ ಚಿತ್ರಮಂದಿರದಲ್ಲಿ ತಾ|| 7, 8 ಮತ್ತು 9 ರಂದು ಬೆಳಿಗ್ಗೆ 10.30 ಕ್ಕೆ
ವಿಶೇಷ ಬೆಳಿಗಿನ ಪ್ರದರ್ಶನ ರೆಗ್ಯುಲರ್ ಶೋ ದರದಲ್ಲಿ

ಪ್ರಾಸಿಕ್ಯೂಟ್ ಮಾಡಲಾಗುವದು

ಬೊಂಬಾಯಿ— ಬೊಂಬಾಯಿನಲ್ಲಿ ಈಚೆಗೆ ನಡೆದ ಗಲಭೆಗೆ ಕಾರಣರಾದ ಶಿವ ಸೇನಾ ನಾಯಕ ಬಾಲ ಥ್ಯಾಕರೆ ಮತ್ತಿತರ ಮೇಲೆ ಕ್ರಮ ಜರುಗಿಸಲಾಗುವದೆಂದು ಮುಖ್ಯ ಮಂತ್ರಿ ನಾಯಿಕ್ ಹೇಳಿದರು.

○

ಜೂಜುಗಾರ ಪೋಲೀಸರು

ಬೆಂಗಳೂರು— ಸೋಮವಾರ ರಾತ್ರೆ ಬಸವನಗುಡಿಯಲ್ಲಿ ಜೂಜಾಡುತ್ತಿದ್ದ 3 ಮಂದಿ ಪೋಲೀಸು ಪ್ಯಾದೆಯರನ್ನು ಸಸ್ಪೆಂಡು ಮಾಡಲಾಗಿದ್ದು, ಇಲಾಖಾ ವಿಚಾರಣೆ ನಡೆಸಲಾಗುವದೆಂದು ಪೋಲೀಸು ಕಮಿಷನರ್ ಶ್ರೀ ವೀರಭದ್ರಯ್ಯನವರು ಹೇಳಿರುವರು.

★

ಸಿಲೋನಿನಿಂದ ಬರುವವರಿಗೆ

ಬೆಂಗಳೂರು— ಸಿಲೋನಿನಿಂದ ವಾಪಸ್ಸಾಗುವ 1000 ಭಾರತೀಯ ಕುಟುಂಬಗಳನ್ನು ದಕ್ಷಿಣ ಕನ್ನಡದ ಸುಳ್ಯದಲ್ಲಿ ನರಬ್ಬರು ಪ್ಲಾಂಟೇಷನಲ್ಲಿ ನೆಲೆಗೊಳಿಸಲಾಗುವುದೆಂದು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಶಾಸನಸಭೆಯಲ್ಲಿ ತಿಳಿಸಿದರು.

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H H. the Maharaja of Mysore and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi Sri Opera Talkies Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore-4.



Protectthe Cow

ಪುಡ್‌ಲ್ಯಾಂಡ್ಸ್ 28-2-69 ರಿಂದ

ಅಮೋಘ ಆರಂಭ

— ಚಿತ್ತಾಕರ್ಷ ಸಾಂಸಾರಿಕ ಹಿಂದಿ ಚಿತ್ರ —

ಘರ ಕ ಚಿರಾಗ್

ಪಾತ್ರ— ಧರ್ಮೇಂಧರ್, ಬಿಶ್ವಜಿತ್, ವಹಿದಾ ರಹಿಮಾ,
ಬಾಲರಾಜ್ ಸಹಾನಿ, ದೇವ್ ಕುಮಾರ್

ನಿರ್ದೇಶನ : ಜಗದೀವ್ — ಸಂಗೀತ : ಮದನ್ ಮೋಹನ್

[ದಿನ 3 ಪ್ರದರ್ಶನಗಳು]

ಆಪೆರಾ 28-2-69 ರಿಂದ

— ಅತ್ಯಮೋಘ ಹಿಂದಿ ಚಿತ್ರ —

ಪರಿವಾರ್

ಮನರಂಜನ ತೆರಿಗೆ ಮನ್ನಾ ಮಾಡಿದೆ ಪೂರ್ಣರಂಜಿತ

ಪಾತ್ರ : ಜಿತೇಂದ್ರ ನಂದ, ರಾಜೇಂದ್ರನಾಥ್, ಓಂ ಪ್ರಕಾಶ್

.... ದಿನವಹಿ 3 ಆಟಗಳು ....

Quality Printing — Neat Binding

Lakshminarasimha Press

Sivarampet, Mysore

SHAKTI

SUDHA

A Superb Tonic

Help The Gorakshana

ಅಶೋಕ ಪಿಚ್ಚರ್ಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧ ಆಯುರ್ವೇದ ಔಷಧಗಳಿಗಾಗಿ ದೊರೆಯುವ ಕ್ಷೇ

Edited, Printed & Published by Dharmaprachara Nirata M S Krishna Rao (Proprietor) at the Satyavad Press Chamarajapuram, Mysoe 4